ಸಿವಿಲ್ ಮಿಸ್ಲೆನಿಯಸ್ ನಂ.1/2025
ಪಿ.ಡಬ್ಲು-1
*ನಜೀರಬೇಗ್ ತಂದೆ ಯಾಕೂಬಬೇಗ*

ದಿ.06-03-2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು.

**ಪಾಟೀ ಸವಾಲು ಮಾನ್ಯ ಎ.ಜಿ.ಪಿ ರವರಿಂದ:-**

ಸರ್ವೆ ನಂ.23 ಒಟ್ಟು ಎಷ್ಟು ವಿಸ್ತೀರ್ಣ ಇದೆ ಎಂದರೆ ನನಗ ಗೊತ್ತಿಲ್ಲ. ಅದು ಆಕಾರ್ ಬಂದ್ ಪ್ರಕಾರ 24 ಎಕರೆ 8 ಗುಂಟೆ ಇರುತ್ತದೆ ಎಂದರೆ ಸರಿ. ನಾವು ಜಮೀನನ್ನು ಮಲ್ಲಣಗೌಡ ತಂದೆ ಚನ್ನಪ್ಪಗೌಡ, ಬಸನಗೌಡ ತಂದೆ ಚನ್ನಪ್ಪಗೌಡ ರವರ ಕಡೆಯಿಂದ ಖರೀದಿ ಮಾಡಿರುತ್ತೇವೆ. ಅವರ ಹೆಸರಿನಲ್ಲಿ 4 ಎಕರೆ 16 ಗುಂಟೆ ಇದೆ ಎಂದರೆ ಸರಿ. ಅದೇ ಸರ್ವೆ ನಂಬರಿನಲ್ಲಿ ಬಸಪ್ಪ ತಂದೆ ಗದ್ದಪ್ಪ ರವರ ಹೆಸರಿನಲ್ಲಿ 5 ಎಕರೆ 32 ಗುಂಟೆ ಇರುತ್ತದೆ ಎಂದರೆ ಸರಿ. ಅದೇ ಸರ್ವೆ ನಂಬರಿನಲ್ಲಿ ಜೊನ್ನಪ್ಪ ತಂದೆ ಮಲ್ಲಣಗೌಡ ರವರ ಹೆಸರಿನಲ್ಲಿ 8 ಎಕರೆ ಇರುತ್ತದೆ ಎಂದರೆ ಸರಿ. ಅದೇ ಸರ್ವೆ ನಂಬರಿನಲ್ಲಿ ಕೃಷ್ಣಪ್ಪ ತಂದೆ ಗದ್ದೆಪ್ಪ ರವರ ಹೆಸರಿನಲ್ಲಿ 6 ಎಕರೆ ಇರುತ್ತದೆ ಎಂದರೆ ಸರಿ. 3 ಪಹಣಿ ಪತ್ರಿಕೆಗಳ ಪ್ರಕಾರ ಒಟ್ಟು 24 ಎಕರೆ 8 ಗುಂಟೆ ಇದೆ ಎಂದರೆ ಸರಿ. ಸದರಿ ಪಹಣಿ ಪತ್ರಿಕೆ ಮತ್ತು ಆಕಾರ್ ಬಂದ್ ಅನ್ನು ನೋಡಿ ಗುರುತಿಸಿ ಒಪ್ಪಿದ್ದರಿಂದ ಅವುಗಳನ್ನು ನಿ.ಡಿ-1 ರಿಂದ 4 ಎಂದು ಗುರುತಿಸಲಾಯಿತು. ಅದೇ ರೀತಿ ಸರ್ವೆ ನಂ.23 ರಲ್ಲಿ ರಹಿಮಾನ್ ಬೇಗ್ ರವರ ಹೆಸರಿಗೆ 4 ಎಕರೆ 9 ಗುಂಟೆ ಇದೆ ಎಂದರೆ ಸರಿ. ಸದರಿ ಪಹಣಿ ಪತ್ರಿಕೆಗಳನ್ನು ನೋಡಿ ಒಪ್ಪಿದ್ದರಿಂದ ನಿ.ಡಿ-5 ಮತ್ತು 6 ಎಂದು ಗುರುತಿಸಲಾಯಿತು.

2. ರಹಿಮಾನ್ ಬೇಗ್ ಸರ್ವೆಗೆ ಅರ್ಜಿ ಸಲ್ಲಿಸಿದ್ದ ಎಂದರೆ ನನಗೆ ಗೊತ್ತಿಲ್ಲ. ಎಫ್.ಡಿ.ಪಿ.ನಂ.31/2023 ರಂತೆ ಓ.ಎಸ್.ನಂ.242/2022 ರಲ್ಲಿ ನಾನು ಮತ್ತು ನನ್ನ ಅಣ್ಣ ಇಬ್ಬರೂ ಕೂಡಿಕೊಂಡು 5 ಎಕರೆ 24 ಗುಂಟೆಗೆ ರಾಜಿ ಡಿಕ್ರಿ ಪಡೆದಿರುತ್ತೇವೆ ಎಂದರೆ ಸರಿ. 2019 ರಲ್ಲಿ ನಮ್ಮ ಅಣ್ಣ ರಹಿಮಾನ್ ಬೇಗ್ ರವರಿಗೆ 4 ಎಕರೆ 9 ಗುಂಟೆ ಇದ್ದ ಬಗ್ಗೆ ಗೊತ್ತಿತ್ತು ಎಂದರೆ ನನಗೆ ಗೊತ್ತಿಲ್ಲ. ಸದರಿ ವಿಷಯ ಇಬ್ಬರಿಗೂ ಗೊತ್ತಿದ್ದರೂ ಸಹ ನ್ಯಾಯಾಲಯದ ಮುಂದೆ ಸುಳ್ಳು ಮಾಹಿತಿ ಕೊಟ್ಟು ರಾಜಿ ಪಡೆದಿರುತ್ತೇವೆ ಎಂದರೆ ಸರಿಯಲ್ಲ. ಎಫ್.ಡಿ.ಪಿ ಪ್ರಕರಣದಲ್ಲಿ ಕೋರ್ಟ್ ಕಮಿಷನರ್ ಅಳತೆ ಮಾಡಿ ಸಲ್ಲಿಸಿದ ವರದಿಯಲ್ಲಿ ಆಕಾರ್ ಬಂದ್

ಪ್ರಕಾರ 1 ಎಕರೆ 25 ಗುಂಟೆ ವ್ಯತ್ಯಾಸ ಇದೆ ಎಂದು ಷರಾ ಬರೆದಿರುತ್ತಾರೆ ಎಂದರೆ ಸರಿ. ಎದುರುದಾರರು ಮಾನ್ಯ ನ್ಯಾಯಾಲಯದ ಯಾವುದೇ ಆದೇಶ ಉಲ್ಲಂಘನೆ ಮಾಡಿಲ್ಲ ಎಂದರೆ ಸರಿ. ಕಂದಾಯ ದಾಖಲೆಗಳು ಏನಾದರೂ ತಿದ್ದುಪಡಿ ಇದ್ದರೆ ಅವುಗಳನ್ನು ಕಂದಾಯ ಇಲಾಖೆಯ ಮುಂದೆ ಸಲ್ಲಿಸಬೇಕಾಗುತ್ತದೆ ಮಾನ್ಯ ಸಿವಿಲ್ ಅಧಿಕಾರ ವ್ಯಾಪ್ತಿ ಇರುವುದಿಲ್ಲ ಎಂದರೆ ನನಗೆ ಗೊತ್ತಿಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು)
ಓ. ಹೇ. ಕೇ. ಸರಿ ಇದೆ.

ಸಹಿ/-

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ..
ಲಿಂಗಸಗೂರು.